ಶ್ರೀ ಸಿ.ಬೈರೇಗೌಡ :ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಚರ್ಚೆಯಾಗಿದೆ. ಸರ್ಕಾರದವರು ಭರವಸೆಯನ್ನು ಸಹ ಕೊಟ್ಟಿದ್ದಾರೆ. ಈ ಭರವಸೆ ಯಾವುದೂ ಕೂಡ ಈಡೇರಿಲ್ಲ. ನಮ್ಮ ಜಿಲ್ಲೆಯಲ್ಲಿ ಇವತ್ತು ಸುಮಾರು 2ಲಕ್ಷ ಎಕರೆಯಲ್ಲಿ ತರಕಾರಿ ಬೆಳೆಯುತ್ತಿದ್ದಾರೆ ರೇಷ್ಮೆ ಬೆಳೆಯ ಬಗ್ಗೆ ಚರ್ಚೆಯಾಗಿದೆ. ಒಂದು ಕಡೆ ಊಜಿನೊಣದಿಂದ ರೈತರಿಗೆ ನಷ್ಟವಾಗಿರತಕ್ಕದ್ದು ಕೊಳವೆ ಬಾವಿಗಳಲ್ಲಿರುವ ಅಲ್ಪಸ್ವಲ್ಪ ನೀರನ್ನು ತೆಗೆದುಕೊಳ್ಳುವುದಕ್ಕೆ ರೈತರು ಕಣ್ಣೀರು ಇಡುತ್ತಿದ್ದಾರೆ.

ಅಧ್ಯಕ್ಷರು : ನೀವು ವಿವರಕ್ಕೆ ಹೋಗುತ್ತಿದ್ದೀರಿ.

ಶ್ರೀ ಸಿ.ಬೈರೇಗೌಡ : ಮಾನ್ಯ ರಾಜೂಗೌಡರು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯ ವರದಿಯನ್ನು ಕೊಟ್ಟಿದ್ದಾರೆ. ನಾವು ನಮ್ಮ ಜಿಲ್ಲೆಯಲ್ಲಿನ ಅನೇಕ ತೋಟಗಳಿಗೆ ಹೋಗಿದ್ದೇವೆ. ಅಲ್ಲಿಯಾವ ರೀತಿ ಮೆಂಟೇನ್ ಮಾಡುತ್ತಿದ್ದಾರೆಂದು ಅವರೇ ಕಣ್ಣಾರೆ ಹೋಗಿ ನೋಡಿದ್ದಾರೆ.

1.10 ಪಿ.ಎಂ.

ಪಂಜಾಬಿನಲ್ಲಿರುವ ಭಯೋತ್ಪಾದಕರ ಗುಂಡುಗಳನ್ನು ಎದುರಿಸಿ ನಮ್ಮ ರಾಜ್ಯದ ಜಿಲ್ಲೆಗಳಲ್ಲಿರತಕ್ಕಂಥ ರೈತರು ಇವ್ಹೊತ್ತು 70-80 ಕೆ.ಜಿ. ಇರುವ ಆಲೂಗಡ್ಡೆಯ ಮೂಟೆಗೆ 1,200 ರೂಪಾಯಿಗಳವರೆಗೂ ಕೊಟ್ಟಿದ್ದಾರೆ. ಅಂತಹ ಬೆಳೆ ಇವ್ಹೊತ್ತಿನ ದಿವಸ ಬೆಳಗುತ್ತಿದೆ. ನಮ್ಮ ಹೊಟ್ಟೆ ಉರಿತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ಇವ್ಹೊತ್ತು ಸಾಯುಂಕಾಲ 4 ಗಂಟೆಗೆ ಸದನದ ಕಾರ್ಯಕಲಾಪಗಳ ಸಮಿತಿ ಸಭೆ ಇದೆ. ನೀವು ಸಮಿತಿಸಭೆಯ ಸದಸ್ಯರಾಗಿರುವುದರಿಂದ ಸಭೆಗೆ ಬನ್ನಿ, ಇದರ ಬಗ್ಗೆ ಯಾವಾಗ ಚರ್ಚೆ ಮಾಡಬೇಕೆಂಬುದರ ಬಗ್ಗೆ ತೀರ್ಮಾನ ಮಾಡೋಣ. ಈ ವಿಚಾರ ಬಹಳ ಮಹತ್ವವಾಗಿದ್ದು, ಗಂಭೀರಹಾಗೂ ಭಯಂಕರವಾಗಿದೆ. ಇದೊಂದು ಅತ್ಯಂತ ಪ್ರಮುಖವಾದ ಜ್ವಲಂತ ಸಮಸ್ಯೆಯಾಗಿದೆ ಎನ್ನತಕ್ಕಂಥಾದ್ದು ನನ್ನ ಅನುಭವಕ್ಕೂ ಕೂಡ ಬಂದಿದೆ. ಆದುದರಿಂದ, ಶ್ರೀ ಶಿವರಾಮು ಅವರಾಗಲೀ, ಶ್ರೀ ಬೈರೇಗೌಡರಾಗಲೀ, ವಿರೋಧಪಕ್ಷದ ನಾಯಕರಾಗಲೀ ಮತ್ತಿತರ ಸದಸ್ಯರುಗಳಾಗಲೀ ಇದರ ಬಗ್ಗೆ ಒಟ್ಟಾರೆಚಿಂತನೆ ಮಾಡತಕ್ಕಂಥ ಕಾಲ ಬಂದಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಇಂದು ಮಧ್ಯಾಹ್ನ ಈ ವಿಷಯವನ್ನುಕಾರ್ಯಕಲಾಪಗಳ ಸಮಿತಿ ಸಭೆ ಮುಂದಿಟ್ಟು ಒಂದು ನಿರ್ದಿಷ್ಟ ದಿನಾಂಕವನ್ನು ಗೊತ್ತು ಮಾಡಿ, ಒಂದು ಅರ್ಥಪೂರ್ಣವಾದಂಥ ಚರ್ಚೆಯನ್ನು ಮಾಡಿ. ಈ ಇಲಾಖೆಯನ್ನು ನಮ್ಮ ಹತೋಟಿಗೆ ತೆಗೆದುಕೊಳ್ಳಬೇಕಾದಂಥ ಕಾಲ ಬಂದಿದೆಯೆಂಬುದನ್ನು ನಿಮ್ಮ ಜೊತೆಗೆ ನಾನೂ ಸಹ ಒಪ್ಪುತ್ತೇನೆ.

ಶ್ರೀ ಸಿ.ಬೈರೇಗೌಡ : ಧನ್ಯವಾದಗಳು.

ವರದಿಗಳನ್ನೊಪ್ಪಿಸುವುದು.

ಶ್ರೀ ಜಿ.ರಾಜುಗೌಡ : (ಅಧ್ಯಕ್ಷರು, ಸಾರ್ವಜನಿಕ ಉದ್ದಿಮೆಗಳ ಸಮಿತಿ) ಮಾನ್ಯ ಸಭಾಧ್ಯಕ್ಷರೇ, ಸಾರ್ವಜನಿಕ ಉದ್ದಿಮೆಗಳ ಸಮಿತಿಯ 48,49,50,51 ಮತ್ತು 52ನೇ ವರದಿಗಳನ್ನು ಸಭೆಯ ಮುಂದೆಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಬಿ.ಎಂ. ಇದಿನಬ್ಬ (ವಿಧಾನಸಭೆಯ ಹಕ್ಕುಭಾಧ್ಯತಾ ಸಮಿತಿಯಅಧ್ಯಕ್ಷರ ಪರವಾಗಿ) ಮಾನ್ಯ ಸಭಾಧ್ಯಕ್ಷರೇ, ಹಕ್ಕುಭಾಧ್ಯತಾ ಸಮಿತಿಯ ಒಂದನೇಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಗಮನಸೆಳೆಯುವ ಸೂಚನೆ

ವೀರಪ್ಪನ್ ಮತ್ತು ಆತನ ಸಹಚರರಿಂದ ಸಾರ್ವಜನಿಕರಿಗೆ ಭಯದ ಬೆದರಿಕೆ.

ಶ್ರೀ ಜಿ. ರಾಜುಗೌಡ : ಮಾನ್ಯ ಸಭಾಧ್ಯಕ್ಷರೇ, ಕುಖ್ಯಾತ ವೀರಪ್ಪನ್ ಮತ್ತು ಆತನ ತಂಡದವರು ಒಂದು ವಾರದಿಂದೀಚೆಗೆ ದಾರಿಹೋಕರಿಗೆ ಕೊಡುತ್ತಿರುವ ಕಿರುಕುಳ, ತೊಂದರೆ, ಹಣಕ್ಕಾಗಿ ಬಂಧನ ಇತ್ಯಾದಿ ಅಕ್ರಮ ಚಟುವಟಿಕೆಗಳಿಂದ ಆ ಭಾಗದಲ್ಲಿರುವ ಜನರು ಭಯಭೀತರಾಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ 18-02-92ರಂದು ಹನೂರು ಗ್ರಾಮದ ಪ್ರಧಾನರಾದ ಶ್ರೀ ಸಂಪಂಗಿ ರಾಮಯ್ಯ ಎಂಬುವರು, ರಾಂಪುರ ಪೋಲೀಸ್ ಠಾಣೆಗೆ ಹಾಜರಾಗಿ ದೂರು ಒಂದನ್ನು ಕೊಟ್ಟಿದ್ದಾರೆ. ವಿವರ ಹೀಗಿದೆ.

ದಿನಾಂಕ 16-02-92 ರಂದು ಮಧ್ಯಾಹ್ನ 3 ಘಂಟೆಯಲ್ಲಿ ಫಿರ್ಯಾದಿದಾರರ ಮಗ ರಾಮಮೂರ್ತಿ ಮತ್ತು ಇತರ 3 ಜನರು ಮಾರುತಿ ಜಿಪ್ಸಿ ವಾಹನದಲ್ಲಿ ಬರುತ್ತಿರುವಾಗ ಚೆಂಗಡಿ ರಸ್ತೆಯ ಹತ್ತಿರದ ಅರಣ್ಯದಲ್ಲಿ ವೀರಪ್ಪನ್ ಗುಂಪಿನ 15 ಜನರು ಇವರನ್ನು ಹೆದರಿಸಿ ಅಪಹರಿಸಿರುತ್ತಾರೆ. ಕೆಲ ಸಮಯದನಂತರ ಇವರಲ್ಲಿ ಒಬ್ಬರನ್ನು ವಾಪಸ್ಸು ಕಳುಹಿಸಿಕ್ವಾರಿಯ ಮ್ಯಾನೇಜರ್ ಗುಣಶೇಖರನವರನ್ನು ಕರೆತರುವಂತೆ ಹೇಳಿದರು. ಗುಣಶೇಖರ ಎಂಬುವವರು ಗುಂಪಿಗೆ ಬಂದನಂತರ, ರಾಮಮೂರ್ತಿಗೆ ಅವರತಂದೆಗೆ ರೂ. 2-00 ಕೋಟಿ ಮುಂಚಿತವಾಗಿ ತಿಳಿಸಿರುವ ಜಾಗಕ್ಕೆತಂದುಕೊಟ್ಟು ರಾಮಮೂರ್ತಿಯನ್ನು ಬಿಡಿಸಿಕೊಂಡು ಹೋಗುವಂತೆಪತ್ರ ಬರೆಯಬೇಕೆಂದು ಬೆದರಿಸಿ ಬರೆಸಿರುತ್ತಾರೆ. ಅಪಹರಿಸಿದ ಗುಂಪು ದಿನಾಂಕ 17-02-92 ರಂದು ಒಬ್ಬರನ್ನು ಬಿಡುಗಡೆಗೊಳಿಸಿರುತ್ತಾರೆ. ಅದರಂತೆ ದಿನಾಂಕ 21-02-92ರಂದು ಸಂಪಂಗಿರಾಮಯ್ಯನವರ ಮಗ ರಾಮಮೂರ್ತಿಯನ್ನೂ ಸಹ ಬಿಡುಗಡೆಗೊಳಿಸಿರುತ್ತಾರೆ. ಸದರಿ ವಿಷಯದಲ್ಲಿ ಸದಪಂಗಿರಾಮಯ್ಯನವರು, ಅಪಹರಣಕಾರರ ಗುಂಪಿಗೆ ಹಣ ಏನಾದರೂ ಕೊಟ್ಟಿರುವರೇ ಎಂಬ ಬಗ್ಗೆ ಯಾವುದೇ ಮಾಹಿತಿ ಗೊತ್ತಾಗಿರುವುದಿಲ್ಲಮತ್ತು ಅವರೂ ಸಹ ತಿಳಿಸಲು ನಿರಾಕರಿಸಿದ್ದಾರೆ. ಈ ವಿಷಯದಲ್ಲಿ ರಾಂಪುರ ಪೋಲೀಸ್ ಠಾಣೆ ಅಪರಾದ ನಂ.14.92ಕಲಂ 363 ಭಾರತೀಯ ದಂಡ ಸಂಹಿತೆ ಜೊತೆಗೆ 3 ಮತ್ತು 25 ಭಾರತ ಶಸ್ತ್ರಾಸ್ತ್ರ ಕಾಯ್ದೆಯಡಿಯಲ್ಲಿ ಪ್ರಕರಣ ಒಂದನ್ನು ನೊಂದಾಯಿಸಿಕೊಂಡು ತನಿಖೆ ಮಾಡಲಾಗುತ್ತಿದೆ. ವೀರಪ್ಪನ್ ಗ್ಯಾಂಗ್‌ನವರಿಂದ ಹಣಕ್ಕಾಗಿ ಅಪಹರಣ ಮಾಡಿದ ಪ್ರಕರಣ ಇದೇ ಮೊದಲನೆಯದಾಗಿರುತ್ತದೆ. ಕಲ್ಲುಗಣಿ ಗುತ್ತಿಗೆ ದಾರರನ್ನು ಅರಣ್ಯದಲ್ಲಿ ಹೆದರಿಸಲಾಗಿದೆಯೆಂದೂ ವರದಿಗಳಿವೆ.